O.S. ನಂಬರಃ 83/2023

ಪಿ. ಡಬ್ಲ್ಯೂಃ 2

ದಿಃ 11-11-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

ಪಾಂಡು ವಾಸು ಗೌಡ ಇವರ ಪರಿಚಯವಿದೆಯಾ ಎಂದರೆ ಇರುತ್ತದೆ ಅವರು ವಾದಿಯ ಅಣ್ಣನಾಗಿದ್ದನು ಎಂದು ನುಡಿಯುತ್ತಾರೆ. ಪಾಂಡು ವಾಸು ಗೌಡ ಇವರ ಹೆಂಡತಿಯ ಹೆಸರು ಏನು ಎಂದರೆ ಸಾಕ್ಷಿಯು ಹೂವಿ ಆಗಿದ್ದು, ಅವರೂ ಸಹ ತೀರಿಕೊಂಡಿರುತ್ತಾರೆ. ಹೂವಿ ನನ್ನ ತಂಗಿ. ನಿಮ್ಮ ಮಗಳ ಹೆಸರು ಏನು ಎಂದರೆ ಸಾಕ್ಷಿಯು ಯಮುನಾ ಎಂದು ನುಡಿಯುತ್ತಾರೆ. ನಿಮ್ಮ ಮಗಳನ್ನು ಯಾರಿಗೆ ಮದುವೆ ಮಾಡಿಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಅಶೋಕ ಎಂಬುವವರ ಜೊತೆ ಮದುವೆ ಮಾಡಿಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಅಶೋಕ ಈತನು ವಾದಿಯ ಮಗ ಎಂದರೆ ಸರಿ. ನಿಮಗೆ ವಾದಿಯು 2 ರೀತಿ ಸಂಬಂಧವಾಗಬೇಕು ಎಂದರೆ ಸರಿ. ನಿಪಿ-5 ಮೃತ್ಯು ಪತ್ರದಲ್ಲಿ ಯಾವ ಊರಿನಲ್ಲಿ ಸಹಿ ಮಾಡಲಾಗಿದೆ ಎಂದು ನಮೂದು ಇದೆಯಾ ಎಂದರೆ ಸಾಕ್ಷಿಯು ಕಾರವಾರದಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಗಣಪಿ ದೇವು ಗೌಡ ಇವರ ಮೂಲ ವಾಸ್ತವ್ಯ ಎಲ್ಲಿ ಇತ್ತು ಎಂದರೆ ಸಾಕ್ಷಿಯು ಮಾಣಿಗದ್ದೆ ಗ್ರಾಮದಲ್ಲಿ ಎಂದು ನುಡಿಯುತ್ತಾರೆ. ಅದು ಅಸಳ್ಳಿ ಕುಂಟಗಣಿಯಿಂದ ಎಷ್ಟು ಕಿ.ಮೀ ಆಗುತ್ತದೆ ಎಂದರೆ ಸಾಕ್ಷಿಯು 2 ಕಿ.ಮೀ ಆಗುತ್ತದೆ ಎಂದು ನುಡಿಯುತ್ತಾರೆ. ಕುಂಟಗಣಿ

ಗ್ರಾಮದ ಅಸಳ್ಳಿಯಲ್ಲಿ ಯಾರ ಮನೆಯಲ್ಲಿ ಗಣಪಿ ದೇವು ಗೌಡ ಇವರು ವಾಸ್ತವ್ಯ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ವಾದಿಯ ಮನೆಯಲ್ಲಿ ಮಾಡಿದ್ದರು ಎಂದು ನುಡಿಯುತ್ತಾರೆ. ವಾದಿಯು ಮಾಣಿಗದ್ದೆಯಲ್ಲಿ ವಾಸ್ತವ್ಯ ಇದ್ದಾರಾ ಅಥವಾ ಇಲ್ಲವಾ ಎಂದರೆ ಇದ್ದಾರೆ ಎಂದು ನುಡಿಯುತ್ತಾರೆ. ವಾದಿ ಮತ್ತು ಪಾಂಡು ವಾಸು ಗೌಡ ಇವರು ನಿಮ್ಮ ಸಂಬಂಧಿಕರು ಆಗಿದ್ದರಿಂದ ಕಾಗದ ಪತ್ರಕ್ಕೆ ಸಹಿ ಹಾಕಿರುತ್ತೀರಿ ಎಂದರೆ ಸರಿ. ನಿಪಿ–5 ರಲ್ಲಿ ಯಾವ ಊರಿನಲ್ಲಿ ಸಹಿ ಮಾಡಿದ್ದು ಎಂದು ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಅದನ್ನು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮಗೆ ಓದಲು ಬರುತ್ತಾ ಎಂದರೆ ಸಾಕ್ಷಿಯು ಕನ್ನಡ ಓದಲು ಬರುತ್ತದೆ ಎಂದು ನುಡಿಯುತ್ತಾರೆ. ನೀವು ಸಹಿ ಮಾಡಿದ್ದೇನೆ ಎಂದು ಹೇಳುವ ಕಾಗದ ಪತ್ರವನ್ನು ಪ್ರಪ್ರಥಮವಾಗಿ ಎಲ್ಲಿ ಓದಿರುತ್ತೀರಿ ಎಂದರೆ ಸಾಕ್ಷಿಯು ಕಾರವಾರದ ಉಪನೊಂದನಾಧಿಕಾರಿಗಳ ಕಚೇರಿಯಲ್ಲಿ ಓದಿರುತ್ತೇನೆ ಎಂದು ನುಡಿಯುತ್ತಾರೆ. ಉಪನೊಂದನಾಧಿಕಾರಿಗಳ ಕಚೇರಿಗೆ ವಿನಾಯಕ ನಾಯಕ ವಕೀಲರು ಬಂದಿದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಿನಾಯಕ ವಕೀಲರು ಎಲ್ಲಿ ಸಹಿ ಮಾಡಿದ್ದರು ಎಂದರೆ ಸಾಕ್ಷಿಯು ಅವರ ಕಚೇರಿಯಲ್ಲಿ ಮಾಡಿದ್ದರು ಎಂದು ನುಡಿಯುತ್ತಾರೆ. ವಿನಾಯಕ ನಾಯ್ಕ ಇವರು ಸಹಿ ಮಾಡಬೇಕಾದರೆ ನೀವು ಸಹಿ ಮಾಡಿದ್ದರಾ ಅಥವಾ ಇಲ್ಲವಾ ಎಂದರೆ ಸಾಕ್ಷಿಯು ನಾನು ಮೊದಲು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸುಧಾಕರ ಇವರು ಯಾವಾಗ ಸಹಿ ಮಾಡಿದ್ದರು ಎಂದು ಹೇಳಲು ಬರುತ್ತಾ ಎಂದರೆ ಸಾಕ್ಷಿಯು ನನ್ನ ಸಮಕ್ಷಮ ಕಾರವಾರ ಉಪನೊಂದನಾಧಿಕಾರಿಗಳ ಕಚೇರಿಯಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಗಣಪಿ ದೇವು ಗೌಡ ಇವರ ಹೆಬ್ಬಟ್ಟಿನ ಗುರುತನ್ನು ಬೇರೆ ಯಾವುದಾದರೂ ಕಾಗದ ಪತ್ರದ

ಮೇಲೆ ನೋಡಿರುತ್ತೀರಾ ಎಂದರೆ ಸಾಕ್ಷಿಯು ಪಂಚಾಯತಿ ಕಚೇರಿಯಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ವಿನಾಯಕ ನಾಯಕ ವಕೀಲರು ನಿಮ್ಮ ಜೊತೆ ಕಾರವಾರ ಉಪನೊಂದನಾಧಿಕಾರಿಗಳ ಕಚೇರಿಗೆ ಬಂದಿರುವುದಿಲ್ಲ ಎಂದರೆ ಸರಿ. ನೀವು ಕಾರವಾರದಲ್ಲಿ ಸಹಿ ಮಾಡಿದ್ದೇನು ಎಂದು ಹೇಳುವ ಸಮಯದಲ್ಲಿ ವಿನಾಯಕ ನಾಯಕ ವಕೀಲರು ಬಂದಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಅವರನ್ನು ಕಂಡಿದ್ದೇ ಇರುವುದಿಲ್ಲ ಎಂದು ನುಡಿಯುತ್ತಾರೆ. ಗಣಪಿ ದೇವು ಗೌಡ ಇವರು ಕಾರವಾರಕ್ಕೆ ಹೋಗಿದ್ದಾಗಲಿ ಅಥವಾ ಯಾವುದೇ ಮೃತ್ಯು ಪತ್ರವನ್ನು ಮಾಡಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಗಣಪಿ ದೇವು ಗೌಡ ಇವರ ಸಮಕ್ಷಮದಲ್ಲಿ ಯಾವುದೇ ಸಹಿ ಮಾಡಿದ್ದೇ ಇರುವುದಿಲ್ಲ ಎಂದರೆ ಸರಿಯಲ್ಲ. ಗಣಪಿ ದೇವು ಗೌಡ ಇವರಿಗೆ ಓದಲು ಬರೆಯಲು ಬರುತ್ತಿರಲಿಲ್ಲ ಎಂದರೆ ಸರಿ. ಕಾರವಾರದಲ್ಲಿ ಸಹಿ ಹಾಕಬೇಕಾದರೆ ವಿನಾಯಕ ನಾಯಕ ಇವರು ಓದಿ ಹೇಳಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಮತ್ತು ವಾದಿ ಸಂಬಂಧಿಕರು ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಗಣಪಿ ದೇವು ಗೌಡ ಇವರು ಸ್ವತಂತ್ರವಾಗಿ ಕುಂಟಗಣಿ ಗ್ರಾಮದಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿರುತ್ತಾರೆ ಹಾಗೂ ಅಲ್ಲಿ ಅವರ ಪ್ರತ್ಯೇಕ ರೇಷನ್ ಕಾರ್ಡ ಮತ್ತು ಆಧಾರ ಕಾರ್ಡ ಇತ್ತು ಎಂದರೆ ಸರಿಯಲ್ಲ.

2. ನಿಮಗೆ ಗಣಪಿ ಯಾವಾಗಿನಿಂದ ಪರಿಚಯ ಎಂದರೆ ಸಾಕ್ಷಿಯು ನಾನು ಚಿಕ್ಕವನು ಇದ್ದಾಗಿನಿಂದ ಪರಿಚಯ ಎಂದು ನುಡಿಯುತ್ತಾರೆ. ಗಣಪಿ ದೇವು ಗೌಡ ಇವರು ವಾದಿ ಮತ್ತು ಪಾಂಡು ವಾಸು ಗೌಡ ಇವರ ವಿರುದ್ಧ ವಾಂಟಣಿ ದಾವೆ ಮಾಡಿ, ಅದು ಡಿಕ್ರಿಯಾಗಿ

ನಂತರ ಎಫ್ ಡಿ ಪಿ ಪ್ರಕರಣವನ್ನು ಸಲ್ಲಿಸಿರುವ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಸಂಖ್ಯೆ ನಿಮಗೇನಾದರೂ ಗೊತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಎಫ್ ಡಿ ಪಿ ನಂ.06/2006 ನೆದ್ದನ್ನು ಸಲ್ಲಿಸಿರುವ ಬಗ್ಗೆ ಗೊತ್ತಾ ಎಂದರೆ ಸಾಕ್ಷಿಯು ಸದರಿ ಪ್ರಕರಣದಿಂದಲೇ ಗಣಪಿ ಗೌಡ ಇವರಿಗೆ ಆಸ್ತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯನ್ನು ವಾದಿ ಮತ್ತು ಪಾಂಡು ವಾಸು ಗೌಡ ಇವರ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ, ಆಸ್ತಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಗಣಪಿ ದೇವು ಗೌಡ ನೀವು ಹೇಳುವ ಮೃತ್ಯು ಪತ್ರವನ್ನು ಮಾಡುವ ಸಂದರ್ಭದಲ್ಲಿ ಹಿಂದಿನ ದಾವೆಯ ಕಾಗದ ಪತ್ರಗಳನ್ನು ತಂದಿದ್ದರಾ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿರುವುದಿಲ್ಲ, ವಿನಾಯಕ ವಕೀಲರಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನೀವು ಸಹಿ ಮಾಡಿದ ಕಾಗದ ಪತ್ರದಲ್ಲಿ ಹಿಂದಿನ ದಾವೆಯ ವಿಷಯದ ಬಗ್ಗೆ ನಮೂದು ಮಾಡಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನೀವು ಕಾಗದ ಪತ್ರಕ್ಕೆ ಸಹಿ ಹಾಕಿದ್ದಾರೆ ಎನ್ನುವ ಸಂದರ್ಭದಲ್ಲಿ ವಾದಿಯು ಎಲ್ಲಿ ಇದ್ದರು ಎಂದರೆ ಸಾಕ್ಷಿಯು ಮನೆಯಲ್ಲಿ ಇದ್ದರು ಎಂದು ನುಡಿಯುತ್ತಾರೆ. ಗಣಪಿ ಗೌಡ ಮತ್ತು ವಾದಿ ಕಾರವಾರಕ್ಕೆ ಹೋಗಿದ್ದಾರೆ ಎನ್ನುವ ಸಂದರ್ಭದಲ್ಲಿ ನೀವೇನಾದರೂ ಹೋಗಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಗಣಪಿ ಗೌಡ ಮತ್ತು ವಾದಿ ಎಷ್ಟು ಬಾರಿ ಕಾರವಾರಕ್ಕೆ ಹೋಗಿರುತ್ತಾರೆ ಎಂದರೆ ಸಾಕ್ಷಿಯು ನಾನು ನೋಡಿದ ಪ್ರಕಾರ ಒಂದು ಬಾರಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಸುಧಾಕರ ಸೇರುಗಾರ ಇವರ ಮನೆ ನಿಮ್ಮ ಮನೆಯಿಂದ ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿಯು 4-5 ಕಿ.ಮೀ ದೂರವಾಗುತ್ತದೆ ಎಂದು

ನುಡಿಯುತ್ತಾರೆ. ಮಾಣಿಗದ್ದೆಯಿಂದ ಕುಂಟಗಣಿ ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿಯು 4-5 ಕಿ.ಮೀ ದೂರವಾಗುತ್ತದೆ ಎಂದು ನುಡಿಯುತ್ತಾರೆ. ಸುಧಾಕರ ಸೇರುಗಾರ ಓಮ್ನಿ ವಾಹನದ ಚಾಲಕ ಎಂದರೆ ನನಗೆ ಗೊತ್ತಿರುವುದಿಲ್ಲ. ನೀವು ಸಹಿ ಹಾಕಲು ಹೋಗಿರುತ್ತೇನೆ ಎನ್ನುವ ಸಂದರ್ಭದಲ್ಲಿ ಸುಧಾಕರ ಸೇರುಗಾರ ಇವರ ಓಮ್ನಿ ವಾಹನವನ್ನು ತೆಗೆದುಕೊಂಡು ಹೋಗಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸುಧಾಕರ ಸೇರುಗಾರರ ಇವರಿಗೆ ಎಷ್ಟು ಬಾಡಿಗೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನಾನು ರೂ.2 ಸಾವಿರ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಮಗೆ ದುಡ್ಡನ್ನು ಯಾರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಗಣಪಿ ಗೌಡ ಇವರು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಮೃತ್ಯು ಪತ್ರದಲ್ಲಿ ನೀವು ಕಾರವಾರಕ್ಕೆ ಹೋಗಿದ್ದಾಗಲಿ ಅಥವಾ ಅಲ್ಲಿ ಸಹಿ ಮಾಡಿದ್ದಾರೆ ಎನ್ನುವ ಬಗ್ಗೆಯಾಗಲಿ ಯಾವುದೂ ಸಹ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

3. ಪ್ರತಿವಾದಿಯು ಗಣಪಿ ಇವರಿಗೆ ಏನು ಆಗಬೇಕು ಎಂದರೆ ಸಾಕ್ಷಿಯು ತಮ್ಮನ ಮಗಳು ಎಂದು ನುಡಿಯುತ್ತಾರೆ. ಗಣಪಿ ಇವರು ಪ್ರತಿವಾದಿಯನ್ನು ದತ್ತಕ್ಕೆ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಆಸ್ತಿ ಎಲ್ಲ ದತ್ತಕ ಮಗಳಿಗೆ ಹೋಗುತ್ತದೆ ಎನ್ನುವ ಉದ್ದೇಶದಿಂದ ವಾದಿ ನಿಮ್ಮ ಸಂಬಂಧಿಕ ಆಗಿದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು, ವಾದಿ ಮತ್ತು ಸುಧಾಕರ ಸೇರುಗಾರ ಇವರೆಲ್ಲ ಸೇರಿಕೊಂಡು ನಿಪಿ-5 ಮೃತ್ಯು ಪತ್ರವನ್ನು ಬನಾವಟ್ ಆಗಿ ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ದತ್ತಕ

ಮಗಳಿಗೆ ಆಸ್ತಿ ಸೇರಬಾರದು ಎಂಬ ಉದ್ದೇಶದಿಂದ ನೀವೆಲ್ಲ ಸೇರಿಕೊಂಡು ಬನಾವಟ್ ಹಾಗೂ ಖೊಟ್ಟಿ ದಾಖಲಾತಿಗಳನ್ನು ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.